**2 ನೇ ಹೆಚ್ಚುವರಿ ನ್ಯಾಯಾದೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಕುಂದಾಪುರ**

ಸಿಸಿ ನಂಬ್ರಃ 96/2025
ಸಿಡಬ್ಲ್ಯೂ- 1
ಪಿಡಬ್ಲ್ಯೂ-1

| | | |
|---|---|---|
| ಸಾಕ್ಷಿದಾರರ ಹೆಸರು | : | ಪ್ರದೀಪ ಪೂಜಾರಿ |
| ತಂದೆಯ ಹೆಸರು | : | ರಾಜು ಪೂಜಾರಿ |
| ಪ್ರಾಯ | : | 33 ವರ್ಷ |
| ಉದ್ಯೋಗ | : | ರಿಕ್ಷಾ ಚಾಲಕ |
| ವಾಸ | : | ಚಿತ್ತೂರು |

ದಿನಾಂಕಃ **07-08-2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೊಧಿಸಲಾಯಿತು

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ

ಆರೋಪಿತರನ್ನು ನೋಡಿರುವುದಿಲ್ಲ. ದಿಃ 23-11-2024 ರಂದು ನಾನು ಹಾಗೂ ಚಾಸಾ-2 ರವರು ಚಿತ್ತೂರಿನಿಂದ ಮಾರಣಕಟ್ಟೆಗೆ ಹೋಗಿ ವಾಪಾಸ್ಸು ಬರುತ್ತಿದ್ದಾಗ ಚಿತ್ತೂರು ಜಂಕ್ಷನ್ ಬಳಿ ಅಪಘಾತವಾಗಿತ್ತು. ನಮ್ಮ ದೊಡ್ಡಪ್ಪನವರಿಗೆ ಅಪಘಾತವಾಗಿತ್ತು. ಅವರಿಗೆ ಕಾಲು ಮತ್ತು ತಲೆಗೆ ಪೆಟ್ಟಾಗಿತ್ತು. ನಾವು 108 ಅಂಬ್ಯೂಲೆನ್ಸಗೆ ಕರೆಮಾಡಿ ಚಿನ್ಮಯ ಆಸ್ಪತ್ರೆಗೆ ದಾಖಲು ಮಾಡಿರುತ್ತೇವೆ. ಮರುದಿನ ನಾನು ಪೋಲಿಸರಿಗೆ ದೂರನ್ನು ಕೊಟ್ಟಿರುತ್ತೇನೆ. ಸಾಕ್ಷಿಗೆ ದಾಖಲೆಯನ್ನು ತೋರಿಸಿದ್ದು, ಸಾಕ್ಷಿ ದಾಖಲೆ ನೋಡಿ ತನ್ನ ಸಹಿಯನ್ನು ಗುರುತಿಸಿದ್ದು, ದೂರನ್ನು ನಿ.ಪಿ.1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು.

2. ಅದೇ ದಿನ ಮದ್ಯಾಹ್ನ 2-00 ಗಂಟೆಗೆ ಪೊಲಿಸರು ಚಿತ್ತೂರು ಜಂಕ್ಷನ್ ಗೆ ಬಂದು ಸ್ಥಳ ಮಹಜರು ಮಾಡಿ ನನ್ನ ಸಹಿಯನ್ನು ಪಡೆದಿರುತ್ತಾರೆ. ಸಾಕ್ಷಿಗೆ ದಾಖಲೆಯನ್ನು ತೋರಿಸಿದ್ದು, ಸಾಕ್ಷಿ ದಾಖಲೆ ನೋಡಿ ತನ್ನ ಸಹಿಯನ್ನು ಗುರುತಿಸಿದ್ದು, ಮಹಜರನ್ನು ನಿ.ಪಿ.2 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.2(ಎ) ಎಂದು ಗುರುತಿಸಲಾಯಿತು. ಅಪಘಾತ ಸ್ಥಳದಲ್ಲಿ ಒಂದು ಬೈಕು ಇತ್ತು ಅದರ ನಂ. ಕೆಎ-20/ಯು-7875 ಆಗಿರುತ್ತದೆ. ಪೋಲಿಸರು ಆ ವಾಹನವನ್ನು ತೆಗೆದುಕೊಂಡು ಹೋಗಿರುತ್ತಾರೆ. ಮಹಜರು ಸಮಯದಲ್ಲಿ ಪೋಲಿಸರು ವಿಡಿಯೋವನ್ನು ಮಾಡಿಕೊಂಡಿರುತ್ತಾರೆ. ಅದೇ ದಿನ ಸ್ಥಳ ದಲ್ಲಿ ಪೋಟೊವನ್ನು ತೆಗೆದಿರುತ್ತಾರೆ. ಪೋಟೊವನ್ನು ನಿಪಿ-3 ಎಂದು ಗುರುತಿಸಲಾಯಿತು.

3. ನಾನು ಮಾರಣಕಟ್ಟೆಯಿಂದ ವಾಪಾಸ್ಸು ಬರುತ್ತಿದ್ದಾಗ ಅಪಘಾತವಾಗಿ ಬಿದ್ದಿರುತ್ತಾರೆ ಎಂದು ಮಹಜರು ಸಮಯದಲ್ಲಿ ಹೇಳಿಕೆ ಕೊಟ್ಟಿರುತ್ತೇನೆ. ಆ ಸಮಯದಲ್ಲಿ ಆರೋಪಿತರು ಸ್ಥಳ ದಲ್ಲಿ ಇರಲಿಲ್ಲ. ಸಾಕ್ಷಿಗೆ ನಕ್ಷೆಯನ್ನು ತೋರಿಸಿದ್ದು, ಸದರಿ ದಾಖಲೆಗೆ ಸ್ಥಳದಲ್ಲಿ ಸಹಿ ಮಾಡಿರುವುದಾಗಿ ನುಡಿದಿದ್ದು ನಕ್ಷೆಯನ್ನು ನಿ.ಪಿ.4 ಎಂದುದ ಸಾಕ್ಷಿಯ ಸಹಿಯನ್ನು ನಿ.ಪಿ.4(ಎ) ಎಂದು ಗುರುತಿಸಲಾಯಿತು. ಈ ಬಗ್ಗೆ ನಾನು ಪೋಲಿಸರಿಗೆ ಹೇಳಿಕೆ ಕೊಟ್ಟಿರುತ್ತೇನೆ.

<u>ಪಾಟೀ ಸವಾಲುಃ ಆರೋಪಿತ ಪರವಾಗಿ ವಕೀಲರಿಂದಃ</u>

1. ಅಪಘಾತವಾದ ನಂತರ ತಿಳಿದು ಅಪಘಾತ ಸ್ಥಳ ಕ್ಕೆ ಹೋಾಗಿರುತ್ತೇನೆ ಅಂತಾ ಪೊಲೀಸರಿಗೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿ. ನಾನು ಅಪಘಾತ ಸ್ಥಳ ಕ್ಕೆ ಹೋದಾಗ ತುಂಬಾ ಜನ ಸೇರಿದ್ದರು. ಈ ಅಪಘಾತ ಯಾರ ತಪ್ಪಿ ನಿಂದ ಆಗಿರುತ್ತದೆ ಎಂದು ನಾನು ಪ್ರತ್ಯಕ್ಷವಾಗಿ ನೋಡಿರುವುದಿಲ್ಲ. ನಾನು ಸ್ಥಳ ಕ್ಕೆ ಹೋದ ತಕ್ಷಣ ನಾನು ನನ್ನ ದೊಡ್ಡಪ್ಪನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ಯಾರು ಪ್ರತ್ಯಕ್ಷದರ್ಶಿ ಇಲ್ಲದ ಕಾರಣ ನಾನು ಅವರ ಸಂಬಂಧಿಯಾದ ಕಾರಣ ನನ್ನ ಬಳಿ ಒಂದು ದೂರನ್ನು ತೆಗೆದುಕೊಂಡಿರುತ್ತಾರೆ ಎಂದರೆ ಸರಿ. ಅಪಘಾತವನ್ನು ನಾನು ಪ್ರತ್ಯಕ್ಷವಾಗಿ ನೋಡಿರದ ಕಾರಣ ಅಪಘಾತ ಸ್ಥಳ ಇದೇ ಎಂದು ಮರುದಿನ ಪೋಲಿಸರಿಗೆ ತೋರಿಸಿರುವುದಿಲ್ಲ ಎಂದರೆ ಸರಿ. ಪೋಲಿಸರು ತಯಾರಿಸಿದ ಮಹಜರಿಗೆ ಹಾಗೂ ನಕ್ಷೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿ.

2. ನನ್ನ ಸಮಕ್ಷಮ ವಶಪಡಿಸಿಕೊಂಡ ಬೈಕ ಯಾರದ್ದು ಹಾಗೂ ಯಾರಿಗೆ ಸಂಬಂದಪಟ್ಟಿದ್ದು ಎಂದು ಗೊತ್ತಿರುವುದಿಲ್ಲ. ಪೋಲಿಸರು ತಯಾರಿಸಿದ ಮಹಜರಿನಲ್ಲಿ ಅಪಘಾತವೂ ತಾರು ರಸ್ತೆಯ ಮೇಲೆ ಆಗಿತ್ತು ಎಂದರೆ ಸರಿ. ಅಪಘಾತದ ಸ್ಥಳ ದ ದಕ್ಷಿಣ ಭಾಗದಲ್ಲಿ 4 ಅಡಿ ಮಣ್ಣು ರಸ್ತೆ ಇರುತ್ತದೆ ಎಂದರೆ ಸರಿ.

<u>ಮರು ವಿಚಾರಣೆಃ ಇಲ್ಲ</u>

ಓದಿ ಹೇ. ಕೇ. ಸರಿ ಇದೆ. ನನ್ನ ಹೇ. ಮೇ. ಬೆ. ಮಾಡಲಾಗಿದೆ

**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾದೀಶರು**
**ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ (C/c)**